**PW-3**

**ದಿಃ 14-11-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಹೆಚ್ ಎಂ ವಿ 2 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಪಿಯುಸಿ ಯವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ. ಪ್ರಕರಣವನ್ನು 2 ನೇ ಪ್ರತಿವಾದಿಯ ವಿರುದ್ಧ 2 ನೇ ಪ್ರತಿವಾದಿಯ ಸಹೋದರರು ದಾಖಲಿಸಿದ್ದಾರೆ. ನಾನು ಸಲ್ಲಿಸಿದ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ನೀಡಿದ್ದಾರೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ವಾದಿಗಳು ಮತ್ತು 1 ರಿಂದ 7 ನೇ ಪ್ರತಿವಾದಿಗಳು ಎಂದರೆ ಷಣ್ಮುಖಪ್ಪ, ಜಯಪ್ಪ, ಯೋಗೇಶಪ್ಪ, ಸದಾಶಿವಪ್ಪ, ಪರಮೇಶ್ವರಪ್ಪ, ಯತೀಶಪ್ಪ, ಚಂದ್ರಮ್ಮ ಮತ್ತು ಸುಲೋಚನ ಅವರಾಗಿದ್ದಾರೆ. ಪರಮೇಶ್ವರಪ್ಪ, ಯತೀಶಪ್ಪರವರು ಮರಣ ಹೊಂದಿ ಸುಮಾರು 5-6 ವರ್ಷಗಳಾಗಿವೆ. 1 ನೇ ಪ್ರತಿವಾದಿ ಎಂದರೆ ಸದಾಶಿವಪ್ಪ. ಗಂಗಮ್ಮರವರು ವಾದಿ ಮತ್ತು 2 ನೇ ಪ್ರತಿವಾದಿಯ ತಾಯಿ. ಗಂಗಮ್ಮನ ಗಂಡನ ಹೆಸರು ಶಿವರುದ್ರಪ್ಪ. ಶಿವರುದ್ರಪ್ಪರವರಿಗೆ ಒಬ್ಬ ಸಹೋದರ ಎಂದರೆ ವಿ.ಹೆಚ್. ಈಶ್ವರಪ್ಪ. ಶಿವಲಿಂಗಮ್ಮ ಮತ್ತು ಸಿದ್ದಮ್ಮ ಶಿವರುದ್ರಪ್ಪರವರ ಅಕ್ಕ ತಂಗಿಯರಾಗಿದ್ದು ಅವರು ಮರಣ ಹೊಂದಿದ್ದಾರೆ.

ಶಿವರುದ್ರಪ್ಪ ಮತ್ತು ಈಶ್ವರಪ್ಪ ಯಾವಾಗ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ನನಗೆ ಮಾಹಿತಿ ಇಲ್ಲ. ಈಶ್ವರಪ್ಪರವರಿಗೆ ರುದ್ರಮ್ಮ ಮತ್ತು ಶಿವಲಿಂಗಮ್ಮ ಅಂತಾ ಇಬ್ಬರು ಹೆಂಡತಿಯರು. ಈಶ್ವರಪ್ಪರವರಿಗೆ ತನ್ನ ಇಬ್ಬರು ಹೆಂಡತಿಯರಿಂದ ಮಕ್ಕಳಾಗಿಲ್ಲ. ಈಶ್ವರಪ್ಪ ಮತ್ತು ಶಿವರುದ್ರಪ್ಪ ಇಬ್ಬರೂ ಪ್ರತ್ಯೇಕ ಮನೆಗಳಲ್ಲಿ ವಾಸ ಇದ್ದರು ಎಂದರೆ ಸರಿ. ಸದರಿ ಈಶ್ವರಪ್ಪ ಮತ್ತು ಶಿವರುದ್ರಪ್ಪ ಇಬ್ಬರು ತಮ್ಮ ತಮ್ಮ ಆಸ್ತಿಗಳನ್ನು ತಾವೇ ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದರು ಎಂದರೆ ಸರಿ. ಈಶ್ವರಪ್ಪರವರಿಗೆ ಮಕ್ಕಳು ಇರದೇ ಇದ್ದ ಕಾರಣ 2 ನೇ ಪ್ರತಿವಾದಿಯನ್ನು ದತ್ತಕ ಪಡೆದಿದ್ದರು ಎಂದರೆ ಸರಿ. 2 ನೇ ಪ್ರತಿವಾದಿ ದತ್ತಕ ಪಡೆದಾಗಿನಿಂದ ಈಶ್ವರಪ್ಪರವರೊಂದಿಗೆ ವಾಸ ಇದ್ದ ರು ಎಂದರೆ ಸಾಕ್ಷಿ ಎರಡು ಕಡೆ ವಾಸ ಇದ್ದರು ಎಂದು ನುಡಿಯುತ್ತಾರೆ. ಈಶ್ವರಪ್ಪ ಮರಣ ನಂತರ ಅವರ ಆಸ್ತಿಗಳನ್ನು 2 ನೇ ಪ್ರತಿವಾದಿಯೇ ಸಾಗುವತಿ ಮಾಡುತ್ತಾ ಬಂದಿದ್ದಾರೆಂದರೆ ಸರಿ. 2 ನೇ ಪ್ರತಿವಾದಿ ಈಶ್ವರಪ್ಪರವರಿಂದ ಬಂದ ಆಸ್ತಿಗಳ ಆದಾಯದಿಂದ ಕೆಲವೊಂದು ಆಸ್ತಿಗಳನ್ನು ಕ್ರಯಕ್ಕೆ ಪಡೆದಿದ್ದಾರೆಂದರೆ ಸರಿ. ಹಾಗೆ ಕ್ರಯಕ್ಕೆ ಪಡೆದ ಆಸ್ತಿಗಳೆಂದರೆ ಸ.ನಂ.29 ಎಂದರೆ ನನಗೆ

ಮಾಹಿತಿ ಇಲ್ಲ. 2 ನೇ ಪ್ರತಿವಾದಿ ಪಡೆದ ಆಸ್ತಿಗಳ ಸ್ವಾಧೀನ ಅವರೇ ಹೊಂದಿದ್ದಾರೆಂದರೆ ಸರಿ. ಈಶ್ವರಪ್ಪ ಮತ್ತು ಶಿವರುದ್ರಪ್ಪ ಮರಣ ಹೊಂದಿ ಸುಮಾರು 20 ವರ್ಷಕ್ಕೂ ಹೆಚ್ಚಿಗೆ ಆಗಿದೆ.

ಶಿವರುದ್ರಪ್ಪರವರು ಜೀವಂತ ಇದ್ದಾಗ ವಾದಿಗಳು ಮತ್ತು 3 ರಿಂದ 7 ನೇ ಪ್ರತಿವಾದಿಗಳು ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದು ಆ ಕಾಲಕ್ಕೆ ನಾನು ಹಾಜರಿದ್ದೆ ಎಂದರೆ ಸರಿ. ಆ ಕಾಲಕ್ಕೆ ವಾದಿಗಳು, 3 ರಿಂದ 7 ನೇ ಪ್ರತಿವಾದಿಗಳು ಹಂಚಿಕೆ ಮಾಡಿಕೊಂಡ ಬಗ್ಗೆ ನಾವು ದಾಖಲೆ ಬರೆದಿದ್ದೇವು ಎಂದರೆ ಸರಿ. ಸಾಕ್ಷಿ ನಿಡಿ 2 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಡಿ 2 (ಬಿ) ಎಂದು ಗುರುತಿಸಲಾಯಿತು. ನಿಡಿ 2 ರಂತೆ ಮಾಡಿಕೊಂಡ ವಿಭಾಗದನ್ವಯ ಅದರಲ್ಲಿ ಕಾಣಿಸಿದ ವ್ಯಕ್ತಿಗಳು ತಮ್ಮ ತಮ್ಮ ಭಾಗಕ್ಕೆ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಾ ಬಂದಿದ್ದಾರೆಂದರೆ ಸರಿಯಲ್ಲ. ನಿಡಿ 2 ರ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಹಾಗೆ ಬರೆಸಲು ತೊಂದರೆ ಇರಲಿಲ್ಲ. ನಿಡಿ 2 ರಂತೆ ಈಗಾಗಲೇ ವಿಭಾಗವಾಗಿದ್ದು ಮತ್ತು ವಿಭಾಗ ಆಗತಕ್ಕ ಯಾವುದೇ ಆಸ್ತಿಗಳು ಉಳಿದಿಲ್ಲ ಆದಾಗ್ಯೂ ವಾದಿಗಳೊಂದಿಗೆ ಸೇರಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ನಿಡಿ 2 ರಂತೆ ವಾದಿಗಳು, 3 ರಿಂದ 7 ನೇ ಪ್ರತಿವಾದಿಗಳು ಅವರವರ ಪಾಲಿಗೆ ಬಂದ ಆಸ್ತಿಗಳ ಸ್ವಾಧೀನದಲ್ಲಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ.

ಈಶ್ವರಪ್ಪರವರ ಇಬ್ಬರು ಹೆಂಡತಿಯರು 2 ನೇ ಪ್ರತಿವಾದಿಯೊಂದಿಗೆ ವಾಸ ಇದ್ದಾರೆಂದರೆ ಸಾಕ್ಷಿ ಶಿವಲಿಂಗಮ್ಮರವರು ತೀರಿಹೋಗಿದ್ದು, ರುದ್ರಮ್ಮರವರು 2 ನೇ ಪ್ರತಿವಾದಿಯೊಂದಿಗೆ ವಾಸ ಇದ್ದಾರೆಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಆಸ್ತಿ ಕಬಳಿಸುವ ಉದ್ದೇಶದಿಂದ ವಾದಿಗಳೊಂದಿಗೆ ಸೇರಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ.

**(ಶ್ರೀ. ಎಸ್ ಬಿ ಪಿ 4 ರಿಂದ 6 ನೇ ಪ್ರತಿವಾದಿ ಪರ ವಕೀಲರು ಮೇಲೀ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅನುಮತಿಸಲಾಯಿತು.)**

**ಮರುವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**PW-3**

**ದಿಃ 13-10-2022 ರಂದು ಸಾಕ್ಷಿಯನ್ನು ಪುನಃಕ ರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ವೈ ಎಂ ಆರ್ ವಾದಿಗಳ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದನ್ನು ತಯಾರಿಸಲು ಮಾಹಿತಿಯನ್ನು ಖುದ್ದು ನಾನೇ ನೀಡಿದ್ದು, ಅದರಲ್ಲಿ ಇರುವ ಸಂಗತಿಗಳೆಲ್ಲಾ ಸತ್ಯವೆಂದು ಪ್ರಮಾಣೀಕರಿಸುತ್ತೇನೆ.

**ಪಾಟೀ ಸವಾಲುಃ ಶ್ರೀ. ಎಂ ಟಿ ಎಸ್ 8 ನೇ ಪ್ರತಿವಾದಿ ಪರ ವಕೀಲರಿಂದಃ**

ವಾದಿಗಳು ಅವರ ಅಣ್ಣ ತಮ್ಮಂದಿರರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದಾರೆ. ವಾದಿಗಳು ಒಂದೇ ಮನೆಯಲ್ಲಿ ವಾಸ ಇದ್ದು, 2 ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸ ಇದ್ದಾರೆ. ಹಾಗೇ ಸುಮಾರು 8-10 ವರ್ಷಗಳಿಂದ ಪ್ರತ್ಯೇಕವಾಗಿ ವಾಸ ಇದ್ದಾರೆ. ದಾವ ಆಸ್ತಿಗಳ ಸ.ನಂ. ಅವುಗಳ ವಿಸ್ತೀರ್ಣ ಗೊತ್ತಿಲ್ಲ. ವಾದಿಗಳು ಮತ್ತು 2 ಮತ್ತು 4 ನೇ ಪ್ರತಿವಾದಿಗಳು ಯಾವ ಯಾವ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದಾರೆಂದು ಹೇಳಲಾಗುವುದಿಲ್ಲ.

**(ಶ್ರೀ. ಡಿ ಆರ್ ಜೆ 3 ಮತ್ತು 7 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)**

**(ಶ್ರೀ. ಎಸ್ ಬಿ ಪಿ ಮತ್ತು ಶ್ರೀ. ಹೆಚ್ ಎಂ ವಿ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**PW-2**

**ದಿಃ 13-10-2022 ರಂದು ಸಾಕ್ಷಿಯನ್ನು ಪುನಃಕ ರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಸ್ ಬಿ ಪಿ 4 ರಿಂದ 6 ನೇ ಪ್ರತಿವಾದಿ ಪರ ವಕೀಲರು ಶ್ರೀ. ಹೆಚ್ ಎಂ ವಿ 2 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅನುಮತಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಂ ಟಿ ಎಸ್ 8 ನೇ ಪ್ರತಿವಾದಿ ಪರ ವಕೀಲರಿಂದಃ**

ವಾದಿಗಳು ಮತ್ತು 1 ರಿಂದ 7 ನೇ ಪ್ರತಿವಾದಿಗಳು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆಂದರೆ ಸರಿಯಲ್ಲ. ದಾವ ಆಸ್ತಿಗಳ ಸ.ನಂ. ಮತ್ತು ವಿಸ್ತೀರ್ಣ ಹೇಳಲಾಗುವುದಿಲ್ಲ. ದಾವ ಆಸ್ತಿಗಳ ಪಹಣಿ ಪತ್ರಿಕೆಗಳು ಯಾರ ಹೆಸರಿನಲ್ಲಿವೆ ಗೊತ್ತಿಲ್ಲ. 8 ನೇ ಪ್ರತಿವಾದಿ ಗೊತ್ತಿಲ್ಲ. ದಾವ ಆಸ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**ದಿಃ 08-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. ಶ್ರೀ ಡಿ.ಆರ್.ಜೆ. 1,3 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಪಾಟಿ ಸವಾಲುಃ ಶ್ರೀ.ಹೆಚ್. ಎಂ.ವಿ 2 ನೇ ಪ್ರತಿವಾದಿ ಪರ ವಕೀಲರಿಂದಃ**

ಸಾಕ್ಷಿ ದಿಃ 01-11-2000 ರಂದು ಬರೆದ ವಿಭಾಗ ಪತ್ರವನ್ನು ತೋರಿಸಿ ಅದರ 5 ನೇ ಪುಟದಲ್ಲಿ ಕ್ರ.ಸಂ. 2 ಸಹಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ವಿಭಾಗ ಪತ್ರದನ್ವಯ ವಾದಿ ಮತ್ತು ಪ್ರತಿವಾದಿಗಳು 2000 ದಲ್ಲಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರವನ್ನು ವಾದಿ ಮತ್ತು ಪ್ರತಿವಾದಿಗಳು ಮತ್ತು ಅದರಲ್ಲಿ ಕಾಣಿಸಿದ ಸಮಕ್ಷಮ ಅದರಲ್ಲಿ ಬರೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ವಾದಿ ಮತ್ತು ಪ್ರತಿವಾದಿಗಳು ಒಂದು ತೀರ್ಮಾನಕ್ಕೆ ಬಂದು ನನ್ನ  ಸಹಿ ಪಡೆದಿರುತ್ತಾರೆ. ನನ್ನ ಸಮಕ್ಷಮಕ್ಕೆ ವಿಭಾಗ ಪತ್ರಕ್ಕೆ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ವಾದಿ ಮತ್ತು ಪ್ರತಿವಾದಿಗಳು ತಾವು ಪರಸ್ಪರ ಚೆನ್ನಾಗಿ ಇದ್ದೇವೆ ಎಂದು ಹೇಳಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ವಿಭಾಗ ಪತ್ರದನ್ವಯ ಸ.ನಂ. 13/5 ರಲ್ಲಿ 35 ಗಂಟೆ, ಸ. ನಂ. 38/2 ಪಿ2 ಆಸ್ತಿಯಲ್ಲಿ 2 ಎಕರೆ 14 ಗುಂಟೆ ಜಮೀನು ಮತ್ತು ಪಾಳು ಜಾಗ 35*60 ಅಡಿ ಜಾಗ 1 ನೇ ವಾದಿಗೆ ಬಂದಿದೆ ಎಂದರೆ ಸಾಕ್ಷಿ ಹಾಗೆ ತಪ್ಪಾಗಿ ಬರೆಯಿಸಿದ್ದಾರೆ ಎಂದು ನುಡಿಯುತ್ತಾರೆ. ಯಾವ ಆಸ್ತಿ 1 ನೇ ವಾದಿಗೆ ಬಂದಿವೆ ಎಂದರೆ ಸಾಕ್ಷಿ ಯಾವುದೇ ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ.

2 ನೇ ವಾದಿಗೆ ಸದರಿ ವಿಭಾಗ ಪತ್ರದನ್ವಯ ಸ.ನಂ. 13/8 ರಲ್ಲಿ 21 ಗುಂಟೆ ಜಮೀನು, ಸ.ನಂ. 137/3 ರಲ್ಲಿ 1 ಎಕರೆ 31 ಗುಂಟೆ ಜಮೀನು, ಸ.ನಂ. 55/ಪಿ1/ಪಿ1 ಆಸ್ತಿಯಲ್ಲಿ 2 ಎಕರೆ ಜಮೀನು ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲದೆ ಮೃತ ಯತೀಶಪ್ಪ ರವರಿಗೆ ಸ.ನಂ. 13/2 ರಲ್ಲಿ 1 ಎಕರೆ 33 ಗುಂಟೆ ಜಮೀನು, ಸ.ನಂ. 38/2 ಪಿ2 ಜಮೀನಿನಲ್ಲಿ 2 ಎಕರೆ 14 ಗುಂಟೆ ಜಮೀನು ಮತ್ತು ಪಾಲು ಜಾಗದಲ್ಲಿ 28 ಅಡಿ ಮತ್ತು 60 ಅಡಿ ಜಾಗ ಬಂದಿದೆ

ಎಂದರೆ ಸಾಕ್ಷಿ ಸದರಿ ವಿಭಾಗ ಪತ್ರದ ಬ ಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಿನಂತಿ ಮೇರೆಗೆ ದಿನಾಂಕ 01-11-2000 ದ ವಿಭಾಗ ಪತ್ರವನ್ನು ನಿಡಿ 2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿ ನಿಡಿ 2 ಎ ಎಂದು ಗುರುತಿಸಲಾಯಿತು.

**(ಸಮಯ 2 ಗಂಟೆ ಆದ್ದರಿಂದ ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**ದಿಃ 08-09-2022 ರಂದು ಪುನಃ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃಶ್ರೀ.ಹೆಚ್. ಎಂ.ವಿ 2 ನೇ ಪ್ರತಿವಾದಿ ಪರ ವಕೀಲರಿಂದಃ**

ನಿಡಿ 2 ರ ಪ್ರಕಾರ 4 ನೇ ಪ್ರತಿವಾದಿಗೆ ಸ.ನಂ. 13/2 ರಲ್ಲಿ 1 ಎಕರೆ 13 ಗುಂಟೆ ಜಮೀನು, ಸ.ನಂ. 85/ಪಿ2 ರಲ್ಲಿ 1 ಎಕರೆ 17 ½ ಗುಂಟೆ ಜಮೀನು, ಸ.ನಂ. 85/ಪಿ6 ಜಮೀನಿನಲ್ಲಿ 1 ಎಕರೆ 17 ½ ಗುಂಟೆ ಜಮೀನು ಮತ್ತು ಮನೆ ಮತ್ತು ಖಾಲಿ ಜಾಗ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಡಿ 2 ರಲ್ಲಿ ಹಂಚಿಕೆಯಾದ ಆಸ್ತಿಗಳಲ್ಲಿ ವಾದಿಗಳು, 2 ರಿಂದ 6 ನೇ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಯತೀಶಪ್ಪ ರವರಿಗೆ ನಿಡಿ 2 ರಲ್ಲಿ ಹಂಚಿಕೆಯಾದ ಆಸ್ತಿಗಳನ್ನು ವಾದಿಗಳು ಮತ್ತು 4 ರಿಂದ 6 ನೇಪ್ರತಿವಾದಿಗಳು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಸ.ನಂ. ಹೇಳಲು ಆಗುವುದಿಲ್ಲ. ಯಾವ ಯಾವ ದಾವಾ ಆಸ್ತಿಗಳಲ್ಲಿ ಯಾರು ಯಾರು ಸ್ವಾದೀನ ಹೊಂದಿದ್ದಾರೆ ಎಂದು ಹೇಳಲು ಆಗುವುದಿಲ್ಲ. 2 ನೇ ಪ್ರತಿವಾದಿ ಮಾತ್ರ ಪ್ರತ್ಯೇಕವಾಗಿ ವಾಸವಾಗಿದ್ಧು ಉಳಿದವರೆಲ್ಲರೂ ಜಂಟಿಯಾಗಿ ವಾಸವಿದ್ದಾರೆ. ಹಾಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 2 ರಂತೆ ವಿಭಾಗ ಆದಾಗಿನಿಂದ ಪ್ರತಿವಾದಿಗಳೆಲ್ಲರೂ ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿಯಲ್ಲ. ನಿಡಿ 2 ರಂತೆ ನನ್ನ ಸಮಕ್ಷಮ ವಿಭಾಗವಾಗಿದ್ದರೂ ಸಹ ನಾನು ನಿಡಿ 2 ಕ್ಕೆ ವಿರುದ್ಧವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಆಸ್ತಿಗಳ ಯಜಮಾನಿಕೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಿಡಿ 2 ರಂತೆ ವಿಭಾಗ ಆಗಿದ್ದ ಕಾರಣ ಪ್ರಸ್ತುತ ವಿಭಾಗ ಮಾಡುವಂತಹ ಯಾವುದೇ ಆಸ್ತಿ

ಉಳಿದಿಲ್ಲ ಎಂದರೆ ಸರಿಯಲ್ಲ. ವಾದಿಗಳು ಹೇಳಿ ಬರೆಯಿಸಿದ ನನ್ನ ಪ್ರಮಾಣ ಪತ್ರಕ್ಕೆ ಸಹಿ ಮಾಡಿ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 2 ರಲ್ಲಿ 2 ನೇ ಪ್ರತಿವಾದಿಗೆ ಯಾವುದೇ ಆಸ್ತಿ ಹಂಚಿಕೆಯಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈಶ್ವರಪ್ಪ ರವರ ದತ್ತು ಪುತ್ರ 2 ನೇ ಪ್ರತಿವಾದಿಯಾಗಿದ್ದ ಕಾರಣ 2 ನೇ ಪ್ರತಿವಾದಿಗೆ ನಿಡಿ 2 ರಲ್ಲಿ ಯಾವುದೇ ಆಸ್ತಿ ಹಂಚಿಕೆಯಾಗಿಲ್ಲ ಎಂದರೆ ಸರಿಯಲ್ಲ.

**(ಶ್ರೀ ಎಸ್.ಬಿ.ಪಿ. 4 ರಿಂದ 6 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಆಳವಡಿಸಲು ಕೋರಿದ್ದು ಅನುಮತಿಸಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು**
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**OS. 13/2019.**

**PW-2**

**ದಿಃ 26-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಶ್ರೀ. ವೈ ಎಂ ಆರ್ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದನ್ನು ತಯಾರಿಸಲು ಮಾಹಿತಿಯನ್ನು ಖುದ್ದು ನಾನೇ ನೀಡಿದ್ದು, ಅದರಲ್ಲಿ ಇರುವ ಸಂಗತಿಗಳೆಲ್ಲಾ ಸತ್ಯವೆಂದು ಪ್ರಮಾಣೀಕರಿಸುತ್ತೇನೆ.

**(ಶ್ರೀ. ಎಂ ಟಿ ಎಸ್ ಮತ್ತು ಶ್ರೀ. ಡಿ ಆರ್ ಜೆ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ವಿನಂತಿಯ ಮೇರೆಗೆ ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**PW 1.**

**ದಿಃ 06-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ 1, 3 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದಃ**

ಈ ಕೇಸಿನಲ್ಲಿ ಇರುವಂತಹ ಆಸ್ತಿಗಳಲ್ಲಿ ಯಾವ ಯಾವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಕೇಳಿದಾಗ ಸಾಕ್ಷಿಯು ಪಿತ್ರಾರ್ಜಿತ ಆಸ್ತಿಗಳು ಕೂಡ ಇದೆ ಮತ್ತು ಕ್ರಯಕ್ಕೆ ಕೊಂಡಂತಹ ಆಸ್ತಿಗಳು ಕೂಡ ಇವೆ, ಅವುಗಳನ್ನು ನೋಡಿ ಹೇಳಬೇಕೆಂದು ನುಡಿಯುತ್ತಾರೆ. ಸ.ನಂ. 10/2 ರಲ್ಲಿರುವಂತಹ ಆಸ್ತಿಯು ಕೊಂಡು ಕೊಂಡಿರುವ ಆಸ್ತಿ. ಸ.ನಂ. 10/2 ಆಸ್ತಿಯನ್ನು ಬಸಪ್ಪನವರಿಂದ ಕೊಂಡುಕೊಂಡಿದ್ದೇವೆ. ಕೊಂಡುಕೊಂಡಿರುವ ಬಗ್ಗೆ ದಾಖಲಾತಿ ಇಲ್ಲ. ದಾವೆಯಲ್ಲಿ ಮಲ್ಲೇಶಪ್ಪನವರಿಂದ ಕೊಂಡುಕೊಂಡಿದ್ದೇವೆಂದು ಬರೆಸಿಲ್ಲ. ಕ್ರಯ ಪತ್ರ ಬರೆದುಕೊಂಡಿಲ್ಲವೆಂದು ಬಸಪ್ಪನ ವಿರುದ್ಧ ಅಥವಾ ಅವರ ತಂದೆಯ ವಿರುದ್ಧ ಯಾವುದೇ ಕೇಸನ್ನು ಹಾಕಿಲ್ಲ. ಕೊಂಡು ಕೊಂಡಂತಹ ಇಸವಿ ಮತ್ತು ತಾರೀಖನ್ನು ಹೇಳಲಾಗುವುದಿಲ್ಲ. ಕೊಂಡುಕೊಂಡಿರುವ ಆಸ್ತಿಯು ಸ.ನಂ. 10/12 ಅಂದರೆ ದಾವ ಆಸ್ತಿ ನಂ. 7 ಎಂದರೆ ಸರಿ. ದಾವ ಆಸ್ತಿ ನಂ. 7 ರ ಬಗ್ಗೆ ಕಂದಾಯ ಕಟ್ಟಿರುವ ದಾಖಲಾತಿ ಇಲ್ಲ. ಸ.ನಂ. 10/12 ಮಲ್ಲೆಶಪ್ಪ ಅಂದರೆ 8 ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿಯ ಮಗಳು ಇದೇ ಆಸ್ತಿಯ ಸಂಬಂಧವಾಗಿ ದಾವೆಯನ್ನು ಪಕ್ಕದ ನ್ಯಾಯಾಲಯದಲ್ಲಿ ಹೂಡಿದ್ದಾರೆಂದರೆ ಸರಿ. ಖಾತೆ ಮತ್ತು ಪಹಣಿಗಳು 8 ನೇ ಪ್ರತಿವಾದಿಯ ಮಗಳ ಹೆಸರಿನಲ್ಲಿವೆ ಎಂದರೆ ಸರಿ. ಬಸಪ್ಪನವರಾಗಲೀ ಅಥವಾ 8 ನೇ ಪ್ರತಿವಾದಿಯಾಗಲೀ ನನಗೆ ಅಥವಾ ನನ್ನ ತಂದೆಯವರಿಗೆ ಸ.ನಂ. 10/12 ಅಂದರೆ ಐಟಂ ನಂ. 7 ನ್ನು ಎಂದಿಗೂ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಬೋರ್ ವೆಲನ್ನು ಹಾಕಿ ತೋಟವನ್ನು ಮಾಡಿದ್ದೇವೆ. ಸ.ನಂ. 10/12 ರಲ್ಲಿ ಬೋರ್ ವೆಲ್ ಹಾಕಿಸಿರುವ ಬಗ್ಗೆ ದಾಖಲಾತಿಗಳು ಇಲ್ಲ.

ದಾವ ಐಟಂ ನಂ. 7 ನ್ನು ಹೊರತುಪಡಿಸಿ ಮಲ್ಲೇಶಪ್ಪನವರ ಕುಟುಂಬಕ್ಕೆ ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವ ಐಟಂ ನಂ. 7 ರ

ಮೇಲೆ ನನಗಾಗಲೀ ಅಥವಾ ಉಳಿದ ಪ್ರತಿವಾದಿಗಳಿಗಾಗಲೀ ಯಾವುದೇ ಹಕ್ಕು ಅನುಭವ ಇಲ್ಲದೇ ಇದ್ದರೂ ಕೂಡ 8 ನೇ ಪ್ರತಿವಾದಿಗೆ ಮತ್ತು ಅವರ ಮಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿದ್ದೇವೆಂದರೆ ಸರಿಯಲ್ಲ. ನನಗಾಗಲೀ ಅಥವಾ ಉಳಿದ ಪ್ರತಿವಾದಿಗಳಿಗಾಗಲೀ ದಾವ ಐಟಂ ನಂ. 7 ರ ಮೇಲೆ ಯಾವುದೇ ರೀತಿಯ ಹಿಸ್ಸೆಯ ಹಕ್ಕು ಇಲ್ಲವೆಂದರೆ ಸರಿಯಲ್ಲ.

**ಪಾಟೀ ಸವಾಲುಃ 2, 4 ರಿಂದ 6 ನೇ ಪ್ರತಿವಾದಿ ಪರ ವಕೀಲರುಗಳಿಂದಃ ಕೋರಿಕೆಯ ಮೇರೆಗೆ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**OS. 13/2019**
**PW 1.**

**ದಿಃ 06-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ 1, 3 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದಃ**

ಈ ಕೇಸಿನಲ್ಲಿ ಇರುವಂತಹ ಆಸ್ತಿಗಳಲ್ಲಿ ಯಾವ ಯಾವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಕೇಳಿದಾಗ ಸಾಕ್ಷಿಯು ಪಿತ್ರಾರ್ಜಿತ ಆಸ್ತಿಗಳು ಕೂಡ ಇದೆ ಮತ್ತು ಕ್ರಯಕ್ಕೆ ಕೊಂಡಂತಹ ಆಸ್ತಿಗಳು ಕೂಡ ಇವೆ, ಅವುಗಳನ್ನು ನೋಡಿ ಹೇಳಬೇಕೆಂದು ನುಡಿಯುತ್ತಾರೆ. ಸ.ನಂ. 10/2 ರಲ್ಲಿರುವಂತಹ ಆಸ್ತಿಯು ಕೊಂಡು ಕೊಂಡಿರುವ ಆಸ್ತಿ. ಸ.ನಂ. 10/2 ಆಸ್ತಿಯನ್ನು ಬಸಪ್ಪನವರಿಂದ ಕೊಂಡುಕೊಂಡಿದ್ದೇವೆ. ಕೊಂಡುಕೊಂಡಿರುವ ಬಗ್ಗೆ ದಾಖಲಾತಿ ಇಲ್ಲ. ದಾವೆಯಲ್ಲಿ ಮಲ್ಲೇಶಪ್ಪನವರಿಂದ ಕೊಂಡುಕೊಂಡಿದ್ದೇವೆಂದು ಬರೆಸಿಲ್ಲ. ಕ್ರಯ ಪತ್ರ ಬರೆದುಕೊಂಡಿಲ್ಲವೆಂದು ಬಸಪ್ಪನ ವಿರುದ್ಧ ಅಥವಾ ಅವರ ತಂದೆಯ ವಿರುದ್ಧ ಯಾವುದೇ ಕೇಸನ್ನು ಹಾಕಿಲ್ಲ. ಕೊಂಡು ಕೊಂಡಂತಹ ಇಸವಿ ಮತ್ತು ತಾರೀಖನ್ನು ಹೇಳಲಾಗುವುದಿಲ್ಲ. ಕೊಂಡುಕೊಂಡಿರುವ ಆಸ್ತಿಯು ಸ.ನಂ. 10/12 ಅಂದರೆ ದಾವ ಆಸ್ತಿ ನಂ. 7 ಎಂದರೆ ಸರಿ. ದಾವ ಆಸ್ತಿ ನಂ. 7 ರ ಬಗ್ಗೆ ಕಂದಾಯ ಕಟ್ಟಿರುವ ದಾಖಲಾತಿ ಇಲ್ಲ. ಸ.ನಂ. 10/12 ಮಲ್ಲೆಶಪ್ಪ ಅಂದರೆ 8 ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿಯ ಮಗಳು ಇದೇ ಆಸ್ತಿಯ ಸಂಬಂಧವಾಗಿ ದಾವೆಯನ್ನು ಪಕ್ಕದ ನ್ಯಾಯಾಲಯದಲ್ಲಿ ಹೂಡಿದ್ದಾರೆಂದರೆ ಸರಿ. ಖಾತೆ ಮತ್ತು ಪಹಣಿಗಳು 8 ನೇ ಪ್ರತಿವಾದಿಯ ಮಗಳ ಹೆಸರಿನಲ್ಲಿವೆ ಎಂದರೆ ಸರಿ. ಬಸಪ್ಪನವರಾಗಲೀ ಅಥವಾ 8 ನೇ ಪ್ರತಿವಾದಿಯಾಗಲೀ ನನಗೆ ಅಥವಾ ನನ್ನ ತಂದೆಯವರಿಗೆ ಸ.ನಂ. 10/12 ಅಂದರೆ ಐಟಂ ನಂ. 7 ನ್ನು ಎಂದಿಗೂ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಬೋರ್ ವೆಲನ್ನು ಹಾಕಿ ತೋಟವನ್ನು ಮಾಡಿದ್ದೇವೆ. ಸ.ನಂ. 10/12 ರಲ್ಲಿ ಬೋರ್ ವೆಲ್ ಹಾಕಿಸಿರುವ ಬಗ್ಗೆ ದಾಖಲಾತಿಗಳು ಇಲ್ಲ.

ದಾವ ಐಟಂ ನಂ. 7 ನ್ನು ಹೊರತುಪಡಿಸಿ ಮಲ್ಲೇಶಪ್ಪನವರ ಕುಟುಂಬಕ್ಕೆ ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವ ಐಟಂ ನಂ. 7 ರ

ಮೇಲೆ ನನಗಾಗಲೀ ಅಥವಾ ಉಳಿದ ಪ್ರತಿವಾದಿಗಳಿಗಾಗಲೀ ಯಾವುದೇ ಹಕ್ಕು ಅನುಭವ ಇಲ್ಲದೇ ಇದ್ದರೂ ಕೂಡ 8 ನೇ ಪ್ರತಿವಾದಿಗೆ ಮತ್ತು ಅವರ ಮಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿದ್ದೇವೆಂದರೆ ಸರಿಯಲ್ಲ. ನನಗಾಗಲೀ ಅಥವಾ ಉಳಿದ ಪ್ರತಿವಾದಿಗಳಿಗಾಗಲೀ ದಾವ ಐಟಂ ನಂ. 7 ರ ಮೇಲೆ ಯಾವುದೇ ರೀತಿಯ ಹಿಸ್ಸೆಯ ಹಕ್ಕು ಇಲ್ಲವೆಂದರೆ ಸರಿಯಲ್ಲ.

**ಪಾಟೀ ಸವಾಲುಃ 2, 4 ರಿಂದ 6 ನೇ ಪ್ರತಿವಾದಿ ಪರ ವಕೀಲರುಗಳಿಂದಃ ಕೋರಿಕೆಯ ಮೇರೆಗೆ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**ದಿಃ 08-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ 1, 3 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದಃ**

ಈ ಕೇಸಿನ 1 ನೇ ಪ್ರ ತಿವಾದಿ ನನ್ನ ತಾಯಿ. 3 ನೇ ಪ್ರತಿವಾದಿ ನನ್ನ ಅಕ್ಕ. 3, 7 ನೇ ಪ್ರತಿವಾದಿಯವರು ನನ್ನ ಅಕ್ಕಂದಿರು. ದಾವ ಆಸ್ತಿಗಳು ನನ್ನ ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಪ್ರತಿವಾದಿ 1, 3 ಮತ್ತು 7 ರವರಿಗೆ ಹಕ್ಕು ಮತ್ತು ಸಮಾನ ಭಾಗ ಇದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

ದಾವ ಐಟಂ ನಂ. 4 ರ ಖಾತೆಯು ಸದಾಶಿವಪ್ಪನವರ ಹೆಸರಿನಲ್ಲಿದೆ. ದಾವ ಐಟಂ ನಂ. 4 ಕ್ಕೆ ಸಂಬಂದಪಟ್ಟಂತೆ ಪಹಣಿಗಳನ್ನು ಹಾಜರುಪಡಿಸಿದ್ದೇನೆ. ಸದಾಶಿವಪ್ಪ ದತ್ತು ಮಗ ಈಶ್ವರಪ್ಪ ಎಂಬುವವರು ಕ್ರ ಯಕ್ಕೆ ಪಡೆದ ಆಸ್ತಿ ಎಂದರೆ ಸರಿಯಲ್ಲ. ಅಂತಹ ದಾಖಲಾತಿಗಳನ್ನು ನಾನು ನೋಡಿಲ್ಲ. ಈಶ್ವರಪ್ಪ ಮತ್ತು ಶಿವರುದ್ರಪ್ಪ ಇಬ್ಬರು ಅಣ್ಣ ತಮ್ಮಂದಿರು ಎಂದರೆ ಸರಿ. ಸದರಿ ಈಶ್ವರಪ್ಪ ನನ್ನ ಚಿಕ್ಕಪ್ಪ. ದಾವ ಐಟಂ ನಂ. 4 ಸದಾಶಿವಪ್ಪನವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಈಶ್ವರಪ್ಪನವರಿಗೆ ಮಕ್ಕಳು ಇಲ್ಲದೇ ಇದ್ದುದ್ದರಿಂದ ಸದಾಶಿವಪ್ಪನವರು ದತ್ತು ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಮನೆಯಲ್ಲಿದ್ದವರನ್ನು ಕರೆದುಕೊಂಡು ಹೋಗಿ ಈಶ್ವರಪ್ಪನವರ ಜತೆಯಲ್ಲಿ ವಾಸ ಮಾಡುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಸುಮಾರು 78-79 ನೇ ಇಸವಿಯಲ್ಲಿ ಸದಾಶಿವಪ್ಪನವರನ್ನು ಕರೆದೊಂಡು ಹೋದರು ಅವರಿಗೆ ಮದುವೆ ಮಾಡಿ ಈಶ್ವರಪ್ಪನವರು ಅಲ್ಲೇ ಇಟ್ಟುಕೊಂಡಿದ್ದರು. ಎರಡು ಕಡೆಯ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು. ಈಶ್ವರಪ್ಪನವರ ಜತೆಗೆ ಹೋದ ನಂತರ ಸದಾಶಿವಪ್ಪನವರು ದಾವಾ ಐಟಂ ನಂ. 4 ನ್ನು ಈಶ್ವರಪ್ಪ ಕೊಂಡುಕೊಂಡರು ಎಂದರೆ ಸರಿಯಲ್ಲ.

ಶಿವರುದ್ರಪ್ಪ ಮತ್ತು ಈಶ್ವರಪ್ಪ ಒಟ್ಟು ಕುಟುಂಬದಲ್ಲಿದ್ದರು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಈಶ್ವರಪ್ಪನವರು ತೀರಿಕೊಂಡ ನಂತರ ಸದಾಶಿವಪ್ಪನವರೇ ಈಶ್ವರಪ್ಪನವರ ಕುಟುಂಬದ ವ್ಯವಹಾರಗಳನ್ನು

ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿಯು ಎರಡು ಕಡೆ ಕೂಡ ಅವರೇ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಶಿವರುದ್ರಪ್ಪ ಮತ್ತು ಈಶ್ವರಪ್ಪನವರ ಎರಡು ಕುಟುಂಬದ ವ್ಯವಹಾರವನ್ನು ಸದಾಶಿವಪ್ಪನವರೇ ನೋಡಿಕೊಳ್ಳುತಿದ್ದರು ಅಂತಾ ದಾವೆಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೇನೆ. ನಮ್ಮ ತಂದೆಯವರು ತೀರಿಕೊಂಡು ಅಂದಾಜು 10 ವರ್ಷವಾಗಿರಬಹುದು. ಈಶ್ವರಪ್ಪನವರು ನಮ್ಮ ತಂದೆ ತೀರಿಕೊಳ್ಳುವ ಎರಡು ವರ್ಷಗಳ ಮುಂಚೆ ತೀರಿಕೊಂಡರು. ಈಶ್ವರಪ್ಪ ಮತ್ತು ಶಿವರುದ್ರಪ್ಪ ಇಬ್ಬರೂ ಸೇರಿ ನಮ್ಮ ಜತೆ ಬಂದು ಮತದಾನ ಮಾಡಿದ ಬಗ್ಗೆ ದಾಖಾಲತಿಗಳು ಇವೆ. ಈಶ್ವರಪ್ಪನವರ ಹೆಂಡತಿ ಶಿವಲಿಂಗಮ್ಮ, ಸದಾಶಿವಪ್ಪ ಮತ್ತು ರುದ್ರಮ್ಮ ಇವರೆಲ್ಲರೂ ಕೂಡ ಒಟ್ಟು ಕುಟುಂಬದಲ್ಲಿ ವಾಸ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನಾವು ಕೂಡ ಅಲ್ಲಿಗೆ ಹೋಗಿ ಬರುತ್ತೇವೆ ಎಂದು ನುಡಿಯುತ್ತಾರೆ.

ವಿ ಎಸ್ ಲೋಕೇಶಪ್ಪ ನನ್ನ ಅಣ್ಣ 4 ನೇ ಪ್ರತಿವಾದಿ ಸಲ್ಲಿಸಿರುವ ತಕರಾರಿನ ಬಗ್ಗೆ ನನಗೆ ಮಾಹಿತಿ ಇಲ್ಲ. 4 ನೇ ಪ್ರತಿವಾದಿಯು 2000 ನೇ ಇಸವಿಯಲ್ಲಿ ಪಾಲು ವಿಭಾಗ ಮಾಡಿಕೊಂಡು ನಮ್ಮ ನಮ್ಮ ಸ್ವಾಧೀನಲ್ಲಿದ್ದೇವೆ ಎಂದು ಬರೆಸಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ. ನಮಗೆ ಯಾವುದೇ ಆಸ್ತಿಯನ್ನು ಭಾಗ ಮಾಡಿಕೊಟ್ಟಿಲ್ಲ ಜೀವನಕ್ಕೆ ಇಷ್ಟು ಆಸ್ತಿ ಮಾಡಿಕೊಳ್ಳಿ ಎಂದು ಮಾತ್ರ ಕೊಟ್ಟಿದ್ದರು, ಹೆಚ್ಚು ಆಸ್ತಿಯನ್ನು ಅವರೇ ಇಟ್ಟುಕೊಂಡಿದ್ದಾರೆ ಎಂದು ನುಡಿಯುತ್ತಾರೆ ಮತ್ತು ನಾವು ಆಸ್ತಿಯನ್ನು ಹಂಚಿಕೊಂಡಿಲ್ಲ ಎಂದು ನುಡಿಯುತ್ತಾರೆ. ಸದಾಶಿವಪ್ಪನವರು ಸ.ನಂ.13/2 ರಲ್ಲಿ 1 ಎಕರೆ 13 ಗುಂಟೆ, ಸಂ.ನಂ. 85/ಪಿ2 ರಲ್ಲಿ 1 17.5 ಗುಂಟೆ, ಸ.ನಂ.ಪಿ ನಲ್ಲಿ 1 ಎಕರೆ 7.5 ಗುಂಟೆ ಜಮೀನು ಮತ್ತು ಮನೆ, ಕಣ ನನ್ನ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ. ಪರಮೇಶ್ವರಪ್ಪನವರು ಸ.ನಂ. 16/1 ಪಿ-ಪಿ1 ರಲ್ಲಿ 1 ಎಕರೆ, 137/3 ರಲ್ಲಿ 1 ಎಕರೆ 31 ಗುಂಟೆ, 55/1-ಪಿ1 ರಲ್ಲಿ 2 ಎಕರೆ ಜಮೀನು ನನ್ನ ಹೆಸರಿಗೆ ಬಂದಿದೆ ಎಂದು ಬರೆಸಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಆಸ್ತಿಗಳಲ್ಲಿ ಲೋಕೇಶಪ್ಪ ಮತ್ತು ಪರಮೇಶ್ವರಪ್ಪನವರ ౧ ಕುಟುಂಬದರು ಹಂಚಿಕೊಂಡು ಈಗಲೂ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಕೆ ಪಿ ಗೀರೀಶ್ ಎಂಬುವವರು ನನ್ನ ಅಕ್ಕನ ಮಗ. ಸ.ನಂ.10/5 ರಲ್ಲಿ 19 ಗುಂಟೆ ಜಮೀನು ಈಗ

ಗೀರೀಶ್ ನವರ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಆಸ್ತಿಯನ್ನು ಲೋಕೇಶಪ್ಪನವರಿಂದ ನಾನು ಕ್ರಯಕ್ಕೆ ಕೊಂಡು ಕೂಂಡು ಅದನ್ನು ಕೆ ಪಿ ಗೀರೀಶ್ ರವರಿಗೆ ಮಾರಟ ಮಾಡಿದ್ದೇನೆ ಎಂದರೆ ಸರಿ. ನಾವೆಲ್ಲರೂ ವಿಭಾಗವಾದ ನಂತರ ಮಾರಾಟ ಮಾಡಿರುವಂತಹ ಆಸ್ತಿ ಎಂದರೆ ಸಾಕ್ಷಿಯು ಅದನ್ನು ನಾನು ಬೇರೆಯವರಿಂದ ಕೊಂಡುಕೊಂಡು ಮಾರಾಟ ಮಾಡಿದ್ದೇನೆ ಎಂದು ನುಡಿಯುತ್ತಾರೆ.

ಐಟಂ ನಂ. 10 ಸದಾಶಿವಪ್ಪನವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ಬಿ ಷೆಡ್ಯೂಲ್ ಆಸ್ತಿಗಳು ಕೂಡ ಸದಾಶಿವಪ್ಪನವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್ ಎಂ ವಿ ವಕೀಲರಿಂದಃ ಕೋರಿಕೆಯ ಮೇರೆಗೆ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**ದಿಃ 08-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಈ ಕೇಸನ್ನು ಯಾವ ಪರಿಹಾರವನ್ನು ಕೋರಿ ಹಾಕಲಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವ ಆಸ್ತಿಯ ನಂಬರ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನಾಗರಾಜಪ್ಪ ನವರು ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿದ್ದಾರೆ. 1 ನೇ ಪ್ರತಿವಾದಿ ಹೇಳಿದಂತೆ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ. ಈ ಪ್ರಕರಣದ ಕುರಿತಾಗಿ ನನಗೆ ಯಾವುದೇ ರೀತಿಯ ವಿಚಾರ ನನಗೆ ಗೊತ್ತಿಲ್ಲ. ನನಗೆ ಯಾವುದೇ ರೀತಿಯ ಮಾಹಿತಿ ಇಲ್ಲದಿದ್ದರೂ ಕೂಡ ನ್ಯಾಯಾಲಯಕ್ಕೆ ಬಂದು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರ